# ಮಾನವ ಜೀವನ ಆದರ್ಶ :
# 'ಸ್ವಂತ ಮುಕ್ತಿಗಾಗಿ ಮತ್ತು ಲೋಕ ಹಿತಕ್ಕಾಗಿ'

ನಾಗೇಶ್ ರಾವ್ ಎಲ್.ಜಿ.

**'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ರಾಮಕೃಷ್ಣ ಮಹಾಸಂಘದ ಧ್ಯೇಯವಾಕ್ಯವನ್ನು ರೂಪಿಸಿ, ಅದರ ಕಾರ್ಯಪ್ರಣಾಳಿಯನ್ನು ರಚಿಸಿದ ಸ್ವಾಮಿ ವಿವೇಕಾನಂದರು ಈ ಆದರ್ಶವನ್ನು ಹೇಗೆ ಕಂಡುಕೊಂಡರು ಎಂಬುದನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಅವರು ಬೆಂಗಳೂರು ಆಶ್ರಮದ ಭಕ್ತರು; ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಪ್ರಸ್ತುತ ಅವರು ಮೈಸೂರಿನಲ್ಲಿ ವಾಸವಾಗಿದ್ದಾರೆ.

ಭಾರತವು ೨೬ನೆಯ ಜನವರಿ ೧೯೫೦ರಂದು ಸರ್ವತಂತ್ರ ಸ್ವತಂತ್ರ ಪ್ರಜಾಸತ್ತಾತ್ಮಕ ಗಣರಾಜ್ಯವಾಯಿತು. ಅಂದಿನಿಂದ ಭಾರತದ ಸಂವಿಧಾನ ಜಾರಿಗೆ ಬಂದಿತು. ಅದರಲ್ಲಿ ಪ್ರಜಾಪ್ರಭುತ್ವದ ಮೂರು ಮಹಾನ್ ಆದರ್ಶಗಳನ್ನು ಹೇಳಲಾಗಿದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆ. ಈ ದಿಸೆಯಲ್ಲಿ ಕಳೆದ ಎಪ್ಪತ್ತು ವರುಷಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಇದಕ್ಕೆ ಮೊದಲು ಭಾರತದಲ್ಲಿ ಬಡವರ ಮತ್ತು ದಲಿತರ ಪರವಾಗಿ ದನಿಯೆತ್ತಿ, ಹೀಗೆ ಮಾತನಾಡಿದ ಮೊದಲ ಧಾರ್ಮಿಕ ನಾಯಕರು ಸ್ವಾಮಿ ವಿವೇಕಾನಂದರು. ಬಡವರ ದೀನ, ದಲಿತರ ದುಃಖಿಗಳ ಬಗೆಗಿನ ಸ್ವಾಮಿ ವಿವೇಕಾನಂದರ ಪ್ರೀತಿ ಮತ್ತು ಕಳಕಳಿಯನ್ನು ರಾಮಕೃಷ್ಣ ಮಹಾಸಂಘದ ಸೇವಾಕಾರ್ಯದಲ್ಲಿ ಒಂದು ನಿರ್ದೇಶಕ ತತ್ತ್ವವಾಗಿ ಅನುಸರಿಸುತ್ತಾ ಬರಲಾಗಿದೆ.

ಸ್ವಾಮಿ ವಿವೇಕಾನಂದರು ಅಮೆರಿಕಾದಿಂದ ಹಿಂತಿರುಗಿದ ನಂತರ, ೧೮೯೭ರ ಮೇ ಒಂದನೆಯ ತಾರೀಖು, ಶ್ರೀರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿದರು. ರಾಮಕೃಷ್ಣ ಮಠ ಮತ್ತು ಮಿಷನ್ ಈ ಕೆಳಗಿನ ಧ್ಯೇಯಗಳನ್ನು ಹೊಂದಿದೆ:

೧. ಜನರ ಧಾರ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದು ಮತ್ತು ಸಾಂಸ್ಕೃತಿಯ ಪರಂಪರೆಯ ಬಗೆಗೆ ಅವರಲ್ಲಿ ಅಭಿಮಾನವನ್ನು ಮೂಡಿಸುವುದು.

೨. ಹಿಂದೂಧರ್ಮದ ಸಮಾನ ಅಂಶಗಳನ್ನು ಎತ್ತಿ ತೋರಿ ಅವುಗಳ ಐಕ್ಯವನ್ನು ಉಂಟುಮಾಡುವುದು.

೩. ತುಳಿತಕ್ಕೊಳಗಾದ ಜನತೆಯ ದುಃಸ್ಥಿತಿಯತ್ತ ಸುಶಿಕ್ಷಿತರ ಗಮನವನ್ನು ಸೆಳೆಯುವುದು ಮತ್ತು ವ್ಯಾವಹಾರಿಕ ಬದುಕಿಗೆ ವೇದಾಂತವನ್ನು ಅನ್ವಯಿಸುವ ಮೂಲಕ ಅವರನ್ನು ಉದ್ಧರಿಸುವ ಯೋಜನೆಯನ್ನು ಪ್ರತಿಪಾದಿಸುವುದು.

ಶ್ರೀರಾಮಕೃಷ್ಣರು ಆಚರಿಸಿದ ಮತ್ತು ಬೋಧಿಸಿದ ವೇದಾಂತದ ಚೈತನ್ಯದಾಯಕ ತತ್ತ್ವಗಳ ಪ್ರಸಾರ ಹಾಗೂ ವ್ಯಾವಹಾರಿಕ ಅನ್ವಯಕ್ಕಾಗಿ ರಾಮಕೃಷ್ಣ ಸಂಘವನ್ನು ಸ್ಥಾಪಿಸಲಾಗಿದೆ.

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಭಾರತದ ಉದ್ದಗಲಕ್ಕೂ ಸಂಚರಿಸಿ ಅಲ್ಲಿನ ಜನರ ಆಚಾರ ವಿಚಾರಗಳು, ಜಾತಿಪದ್ಧತಿ, ಮೂಢನಂಬಿಕೆಗಳು, ಬಡತನ ಸಂಕಷ್ಟಗಳು — ಇವುಗಳನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದಿದ್ದರು. ಅಲ್ಲದೆ ಪಾಶ್ಚಾತ್ಯ ದೇಶಗಳಲ್ಲಿನ ಸಂಘ-ಸಂಸ್ಥೆಗಳ ಸಂಘಟನೆ, ಶಿಸ್ತು, ನಿಯಮಗಳನ್ನು ಅಧ್ಯಯನ ಮಾಡಿದ್ದರು. ಈ ಎಲ್ಲದರ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಹಾಸಂಘವನ್ನು ಭದ್ರಬುನಾದಿಯ ಮೇಲೆ ಸ್ಥಾಪಿಸಿದರು.

ಅವರು ಕೊಟ್ಟ ಸ್ವಂತ ಮುಕ್ತಿಗಾಗಿ ಮತ್ತು ಲೋಕಹಿತಕ್ಕಾಗಿ ಎಂಬ ಧ್ಯೇಯವಾಕ್ಯವು ಮೂಡಿಬಂದ ಹಿನ್ನೆಲೆಯನ್ನು ಈಗ ನೋಡೋಣ:

ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬರುವ ಮೊದಲು ಬ್ರಹ್ಮಸಮಾಜದ ಸದಸ್ಯರಾಗಿದ್ದರು. ಅವರು ಮೂರ್ತಿಪೂಜೆಯನ್ನು ಒಪ್ಪಿಕೊಂಡಿರಲಿಲ್ಲ. ನಿರಾಕಾರ ಸಗುಣ ಬ್ರಹ್ಮವನ್ನು ಪಡೆದುಕೊಳ್ಳಲು ಧ್ಯಾನ ಸಾಧನೆಗೆ ಒತ್ತುಕೊಡುತ್ತಿದ್ದರು. ಪಾಶ್ಚಾತ್ಯ ತತ್ತ್ವಶಾಸ್ತ್ರಗಳನ್ನೂ ಅಧ್ಯಯನ ಮಾಡಿದ್ದರು. ಅಧ್ಯಯನಶೀಲರೂ, ಸೂಕ್ಷ್ಮಮತಿಯೂ ಆಗಿದ್ದರು. ಇಷ್ಟಾದರೂ ಸನಾತನ ಧರ್ಮದ ಪ್ರತಿನಿಧಿಯಾಗಿ ಆ ಧರ್ಮವನ್ನು ಜಗತ್ತಿನ ಮುಂದೆ ಮಂಡಿಸಲು ತಕ್ಕ ಜ್ಞಾನ ಮತ್ತು ಅನುಭವಗಳನ್ನು ಪಡೆದುಕೊಂಡಿರಲಿಲ್ಲ. ಶ್ರೀರಾಮಕೃಷ್ಣರು ನರೇಂದ್ರನಾಥನಿಗೆ ನಿರ್ವಿಕಲ್ಪ ಸಮಾಧಿಯ ಅನುಭವವನ್ನು ಮಾಡಿಸಿದ್ದರು. ಅಷ್ಟೇ ಅಲ್ಲದೆ ತಮ್ಮ ತಪಃಶಕ್ತಿಯನ್ನೂ ಆ ಶಿಷ್ಯನಿಗೆ ಧಾರೆ ಎರೆದುಕೊಟ್ಟರು. ವೇದ ಉಪನಿಷತ್ತುಗಳ ಸಾರಸಂಗ್ರಹವನ್ನು ಸರಳ ಮಾತುಗಳಲ್ಲಿ ತಿಳಿಸಿ ಹೇಳಿ, ಅವರ ಸಂದೇಹಗಳನ್ನೆಲ್ಲಾ ಪರಿಹರಿಸಿ, ಅವರನ್ನು ಲೋಕ ಶಿಕ್ಷಣಕ್ಕೆ ತಯಾರು ಮಾಡಿದ್ದರು. ಅದರ ಫಲವಾಗಿ ಸ್ವಾಮಿ ವಿವೇಕಾನಂದರು ಸನಾತನ ಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಂಡು, ಸಮಾಧಿಯ ಅನುಭವವನ್ನು ಪಡೆದುಕೊಂಡು, ಸನಾತನ ಧರ್ಮದ ಶ್ರೇಷ್ಠ ಪ್ರತಿನಿಧಿಯಾಗಿ ಧರ್ಮಪ್ರಚಾರ ಮಾಡಲು ಸಾಧ್ಯವಾಯಿತು. ತಮ್ಮ ಗುರುಗಳ ಆಣತಿಯಂತೆ ಅವರು ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಸನಾತನ ಧರ್ಮದ ಹಿರಿಮೆಗರಿಮೆಗಳನ್ನು ಸಾರಿದರು.

ಅಂತಹ ಜ್ಞಾನಭಂಡಾರವನ್ನೂ ಉದಾತ್ತ ಚಿಂತನೆಗಳನ್ನೂ ಸ್ವಾಮಿ ವಿವೇಕಾನಂದರು ತಮ್ಮ ಗುರುಗಳಾದ ಶ್ರೀರಾಮಕೃಷ್ಣರಿಂದ ಪಡೆದುಕೊಂಡರು. ಆ ಜ್ಞಾನದ ಬೆಳಕಿನಲ್ಲಿ **'ಶಿವಜ್ಞಾನೇ**

**ಜೀವಸೇವಾ**' ಎಂಬ ಶ್ರೇಷ್ಠ ಆದರ್ಶ ಮೂಡಿಬಂದಿತು. ಜೀವಿಗಳನ್ನು ಶಿವನೆಂದೇ ಭಾವಿಸಿ ಸೇವೆ ಮಾಡುವುದು. ''ಬಡವರಲ್ಲಿ ದುರ್ಬಲರಲ್ಲಿ ಮತ್ತು ರೋಗಿಗಳಲ್ಲಿ ಶಿವನನ್ನು ಕಾಣುವವನು ನಿಜವಾದ ಅರ್ಥದಲ್ಲಿ ಶಿವನನ್ನು ಕಾಣುವವನಿಗಿಂತ ಇಂತಹ ಮನೋಭಾವದ ವ್ಯಕ್ತಿಯನ್ನು ಶಿವ ಮೆಚ್ಚಿಕೊಳುತ್ತಾನೆ.'' ಅವರು 'ದರಿದ್ರ ನಾರಾಯಣ'' ಎಂಬ ಪದವನ್ನು ಟಂಕಿಸಿದರು.

ಸೂಕ್ಷ್ಮಮತಿಯಾದ ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಮಾತುಗಳನ್ನು ಅರ್ಥಮಾಡಿಕೊಂಡು, ಒಂದು ಸೇವಾ ಮನೋಭಾವವನ್ನು ರೂಪಿಸಿಕೊಂಡುದರ ಹಿನ್ನೆಲೆಯನ್ನು ಈಗ ನೋಡಬಹುದು:

೧೮೮೪ರ ಯಾವುದೋ ಒಂದು ಅವಧಿಯಲ್ಲಿ ಶ್ರೀರಾಮಕೃಷ್ಣರು ಶಿಷ್ಯರಿಂದ ಸುತ್ತುವರಿಯಲ್ಪಟ್ಟು ಮಾತನಾಡುತ್ತಿದ್ದರು. ಸಂಭಾಷಣೆ ವೈಷ್ಣವ ಧರ್ಮದತ್ತ ತಿರುಗಿತು. ವೈಷ್ಣವ ಧರ್ಮವು ಅದರ ಅನುಯಾಯಿಗಳಿಗೆ ಮೂರು ವಿಷಯಗಳ ಅನುಷ್ಠಾನ ವಿಧಿಸುತ್ತದೆ: ಭಗವನ್ನಾಮದಲ್ಲಿ ರುಚಿ, ಎಲ್ಲ ಜೀವಿಗಳಿಗೆ ಅನುಕಂಪ ಮತ್ತು ವೈಷ್ಣವ ಭಗವದ್ ಭಕ್ತರ ಸೇವೆ. ಈ ಮಾತುಗಳನ್ನು ಕೇಳಿದೊಡನೆಯೆ ಅವರು ಸಮಾಧಿಗೆ ಸಂದರು. ಸ್ವಲ್ಪ ಹೊತ್ತಿನ ನಂತರ ಅರೆ ಪ್ರಜ್ಞಾವಸ್ಥೆಗೆ ಮರಳಿ ತಮಗೆ ತಾವೇ ಹೇಳಿಕೊಂಡರು: 'ಜೀವಿಗಳಿಗೆ ಅನುಕಂಪ! ಜೀವಿಗಳಿಗೆ ಅನುಕಂಪ! ಎಲೋ ಮೂರ್ಖ! ನೆಲದ ಮೇಲೆ ತೆವಳುವ ಕ್ಷುದ್ರ ಕ್ರಿಮಿಯಾಗಿ ಇತರರಿಗೆ ಅನುಕಂಪ ತೋರುವೆಯಾ? ಅನುಕಂಪ ತೋರಲು ನೀನು ಯಾರು? ಇಲ್ಲ. ಅದು ಸಾಧ್ಯವಿಲ್ಲ; ಇತರರಿಗೆ ಅನುಕಂಪವಲ್ಲ, ಬದಲಿಗೆ ಮನುಷ್ಯನನ್ನು ದೇವರ ಅಭಿವ್ಯಕ್ತಿಯೆಂದೇ ಗ್ರಹಿಸಿ ಅವರಿಗೆ ಸೇವೆ ಸಲ್ಲಿಸುವುದು.'

ಅಲ್ಲಿ ಹಾಜರಿದ್ದ ಪ್ರತಿಯೊಬ್ಬರೂ ಶ್ರೀರಾಮಕೃಷ್ಣರ ಮಾತುಗಳನ್ನು ನಿಸ್ಸಂದೇಹವಾಗಿ ಕೇಳಿಸಿಕೊಂಡರು. ಆದರೆ ನರೇಂದ್ರನ ಹೊರತು, ಮತ್ತಾರೂ ಆ ಮಾತುಗಳ ಅರ್ಥವನ್ನು ಗ್ರಹಿಸದಾದರು. ಅವರು ಕೊಠಡಿಯನ್ನು ಬಿಟ್ಟಾಗ ಇತರರನ್ನು ಕುರಿತು ನುಡಿದರು: ''ಗುರುಗಳ ಈ ಅದ್ಭುತವಾದ ಉಕ್ತಿಗಳಲ್ಲಿ ಎಂಥ ವಿಶಿಷ್ಟವಾದ ಬೆಳಕನ್ನು ನಾನು ಕಂಡುಕೊಂಡೆ! ಭಕ್ತಿಯ ಆದರ್ಶವನ್ನು ಅವರು ವೇದಾಂತ ಜ್ಞಾನದೊಡನೆ ಎಷ್ಟು ಸುಂದರವಾಗಿ ಹೊಂದಿಸಿದರು! ಸಮಾಜದ ಎಲ್ಲೆಯಾಚೆಗಿನ ವಿರಕ್ತರು ಆಚರಿಸುವ ವೇದಾಂತದ ಆದರ್ಶವನ್ನು ಮನೆಮನೆಯಲ್ಲಿಯೂ ಅನುಷ್ಠಾನ ಮಾಡುವುದು ಮತ್ತು ನಮ್ಮೆಲ್ಲ ಬದುಕಿನ ದೈನಂದಿನ ಯೋಜನೆಗಳಿಗೆ ಅನ್ವಯಿಸಿಕೊಳ್ಳುವುದು ಸುಲಭಸಾಧ್ಯ ಎಂಬುದನ್ನು ಈ ವಿವೇಕದ ನುಡಿಗಳಿಂದ ಅರ್ಥಮಾಡಿಕೊಂಡಿದ್ದೇನೆ. ಒಬ್ಬ ವ್ಯಕ್ತಿಯ ವೃತ್ತಿ ಯಾವುದೇ ಆಗಿರಲಿ, ಜಗತ್ತಾಗಿ ಅಭಿವ್ಯಕ್ತಿಗೊಂಡಿರುವವನು ಮತ್ತು ಜೀವಿಗಳನ್ನು ಸೃಷ್ಟಿಸಿರುವವನು ಒಬ್ಬನೇ ದೇವರು ಎಂಬುದನ್ನು ಅವನು ಅರ್ಥಮಾಡಿಕೊಳ್ಳಲಿ. ಭಗವಂತ ಎಲ್ಲದರ ಒಳಗೂ ಹೊರಗೂ ಇದ್ದಾನೆ, ಎಲ್ಲವನ್ನೂ ಮೀರಿ ಕೂಡಾ ಇದ್ದಾನೆ. ನಮ್ಮ ಪ್ರೀತಿಪಾತ್ರನಾಗಿರುವವನು. ಆದರೂ ಎಲ್ಲವನ್ನೂ ಮೀರಿರುವವನು ಅವನು. ಮಾನವತೆಯಲ್ಲಿ ದೈವಿಕತೆಯ ಈ ಸಾಕ್ಷಾತ್ಕಾರ ಅಹಂಕಾರಕ್ಕೆ ಎಡೆಗೊಡದು. ಆ ಸಾಕ್ಷಾತ್ಕಾರದಿಂದಾಗಿ ಒಬ್ಬ ವ್ಯಕ್ತಿಯಲ್ಲಿ ಯಾವುದೇ ಅಸೂಯೆಯಾಗಲಿ ಮತ್ತೊಬ್ಬನ ಬಗ್ಗೆ ಕನಿಕರವಾಗಲಿ ಇರಲಾರದು. ಭಗವದಭಿವ್ಯಕ್ತಿಯೆಂದರಿತು ಮಾಡುವ ಮಾನವಸೇವೆ ಅಂತಃಕರಣವನ್ನು ಶುದ್ಧೀಕರಿಸುತ್ತದೆ. ಅಂಥ ಸಾಧಕ ಶೀಘ್ರವಾಗಿ ತನ್ನನ್ನು ತಾನು ಭಗವಂತನ, ಸಚ್ಚಿದಾನಂದ ಬ್ರಹ್ಮನ ಅವಿಭಾಜ್ಯ ಅಂಗವೆಂದು ತಿಳಿಯುತ್ತಾನೆ. ಏನೇ ಇರಲಿ, ಅದು ಭಗವದಿಚ್ಛೆಯಾಗಿದ್ದರೆ, ನಾನು ಈ ಅದ್ಭುತ ಸತ್ಯವನ್ನು ಸಮಸ್ತ ಲೋಕಕ್ಕೆ ಘೋಷಿಸುವ ದಿನ ಬೇಗನೆ ಬರುತ್ತದೆ. ಅದನ್ನು ನಾನು ಎಲ್ಲರ — ಜಾಣರ, ದಡ್ಡರ, ಧನಿಕರ ಮತ್ತು ದರಿದ್ರರ, ಬ್ರಾಹ್ಮಣರ ಮತ್ತು ದಲಿತರ ಸರ್ವ ಸಾಧಾರಣ ಆಸ್ತಿಯನ್ನಾಗಿ ಮಾಡುತ್ತೇನೆ.'' ಕಾಲ ಪಕ್ವವಾದಂತೆ ನರೇಂದ್ರನಾಥರ ಈ ಉದಾತ್ತ ಅಭೀಪ್ಸೆ ಅಕ್ಷರಶಃ ಮತ್ತು ಸಾರತಃ ಈಡೇರಿತು. ಗುರುದೇವನಿಂದ ಪವಿತ್ರ ಬಳುವಳಿಯಾಗಿ ಪಡೆದ ಈ ಉನ್ನತ ಸೇವಾ ದರ್ಶವನ್ನು ಸ್ವಾಮಿ ವಿವೇಕಾನಂದರು ಮನುಕುಲಕ್ಕೆ ಸಾರಿದರು. *(ಸ್ಫೂರ್ತಿ, ೨೦೧೭. ಪುಟ ೧೭೦-೭೧)*

ಮೇಲೆ ಹೇಳಿರುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸ್ವಾಮಿ ವಿವೇಕಾನಂದರು ''ಸ್ವಂತ ಮುಕ್ತಿಗಾಗಿ ಮತ್ತು ಜಗತ್ತಿನ ಹಿತಕ್ಕಾಗಿ''– ''ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'' ಎಂಬ ಧ್ಯೇಯವಾಕ್ಯವನ್ನು ಕೊಟ್ಟರು. ಇದು ಬರಿಯ ಘೋಷಣೆಯಲ್ಲ, ಕಾರ್ಯರೂಪಕ್ಕೆ ತಂದಿರುವ ಜೀವನ ಆದರ್ಶ.

ಸ್ವಾಮಿ ವಿವೇಕಾನಂದರು ತಮ್ಮ ಗುರುವಿನಿಂದ ಕಲಿತ ಮುಖ್ಯ ತತ್ತ್ವಗಳಲ್ಲೊಂದು, ''ಶಿವಜ್ಞಾನೇ ಜೀವ ಸೇವಾ'' — ಎಂದರೆ ಶಿವನೆಂದು ಭಾವಿಸಿ ಮಾನವನ ಸೇವೆ ಮಾಡುವುದು. ಮನುಷ್ಯನಲ್ಲಿ ದೈವಿಕತೆ ಅಂತರ್ನಿಹಿತವಾಗಿ ಇರುವುದರಿಂದ ನಾವು ಮಾಡುವ ಮಾನವ ಸೇವೆ ವಾಸ್ತವವಾಗಿ ದೇವರ ಸೇವೆಯೇ ಆಗುತ್ತದೆ. ಸೇವೆಯ ಅಗತ್ಯವಿರುವ ವ್ಯಕ್ತಿಯನ್ನು ಕನಿಕರದ ವಸ್ತುವನ್ನಾಗಿ ಕಾಣುವುದರ ಬದಲು ಪೂಜೆಯ ವಸ್ತುವನ್ನಾಗಿ ಕಾಣಬೇಕು. ಇಂತಹ ದೃಷ್ಟಿಯು ಕೊಡುವವನು ಮತ್ತು ಪಡೆಯುವವನು–ಇಬ್ಬರನ್ನೂ ದೊಡ್ಡವರನ್ನಾಗಿ ಮಾಡುತ್ತದೆ.

ಶ್ರೀರಾಮಕೃಷ್ಣ ಮಹಾಸಂಘದಲ್ಲಿ ಸೇವೆಯನ್ನು ''ಜೀವನ ವಿಧಾನವಾಗಿ ಸೇವೆ'' ಎಂಬ ಭಾವನೆಯಿಂದ ಅನುಸರಿಸಲಾಗುತ್ತಿದೆ. ಭಾರತದಲ್ಲಿ ೧೪೦ಕ್ಕೂ ಹೆಚ್ಚು ಕೇಂದ್ರಗಳೂ, ವಿದೇಶಗಳಲ್ಲಿ ೪೨ ಕೇಂದ್ರಗಳೂ ಈ ಸೇವಾಕಾರ್ಯವನ್ನು ಮಾಡುತ್ತಿವೆ. ಇವುಗಳ ಜೊತೆಗೆ ಶ್ರೀಶಾರದಾ ಮಠ ಮತ್ತು ರಾಮಕೃಷ್ಣ ಶಾರದಾ ಮಿಷನ್ ಕೇಂದ್ರಗಳೂ ಸ್ವತಂತ್ರವಾಗಿ ಸೇವೆ ಮಾಡುತ್ತಿವೆ. ಈ ಸೇವಾಕಾರ್ಯ ನಿರಂತರವಾಗಿ ಸಾಗಲಿ, ಎಲ್ಲರ ಬಾಳಿಗೆ ಶುಭವನ್ನು ತರಲಿ. ❖